ತಾರೀಖು 16ನೇ ಮೇ 1889.

ಮೈಸೂರು ಡಿಸ್ಟ್ರಿಕ್ಟ್ ತಿರಮಕೂಡ್ಲು ನರಸೀಪುರ ಸಬ್ ರಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸ ದಸ್ತಾವೇಜಿನ ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು ತಪ್ಪಿದಲ್ಲಿ ರಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರೆನಾಶಪಡಿಸಲ್ಪಡುತ್ತೆ.

ನಂಬರ್.	ದಸ್ತೈವಜನ್ನು ಬರೆದುಕೊಟ್ಟವನ ಹೆಸರು ಮತ್ತು ಅಡಿರ್ಷ.	ದಸ್ತೈವಜನ್ನು ಬರೆಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಜಿಸ್ಟ್ರಿ ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1155 86—87ನೇ ಇಸವಿ	ತಲಕಾಡು ಕಸಬೆಯಲ್ಲಿರುವ ಮುಸಲಮಾನರ ಮೊಜಿ ಬಾರಿಬಾಯಿ ಮುಳವಳ್ಳಿ ಬಿರಾಂಸಾಬಿ ಮಗ ಯಿಮಾಂಸಾಬಿ	ತಲಕಾಡು ಕಸಬೆಯಲ್ಲಿರುವ ವೆಳ್ಳಾಳ ಜಾತಿ ರುದ್ರಗೌಡನ ನಾರಾಯಣಗೌಡನ ಮಗ ಗುರುವೇಗೌಡ	87 2 4	87 2 5	(220) ರೂಪಾಯಿನ ಭುಸ್ಥಿತಿ ಆಧಾರ ಪತ್ರ ನಡೆದದಿವಸಕ್ಕೆ ಶೇಕಡಾ 1ಕ್ಕೆ 4⅓ ಖಂಡಗ ಮೇರೆ ಭತ್ತಾ ಕೊಡುವದಾಗಿ

ನಂ. 2. ತಾರೀಖು ನೇ ಮೇ 1889.

ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ಸಬ್ ರಜಿಸ್ಟ್ರಾರ್ರ ಆಫಿಸಿನಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು. ತಪ್ಪಿದಲ್ಲಿ ರಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್‌ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬರ್.	ದಸ್ತಾವೇಜನ್ನು ಬರದುಕೊಟ್ಟವನ ಹೆಸರು ಮತ್ತು ಅಡಿರ್ಷ.	ದಸ್ತಾವೇಜನ್ನು ಬರಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಜಿಸ್ಟ್ರಿ ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
361 1886—87	ಬಿಳಕೆರೇಲಿರುವ ವೈಷ್ಣವಬ್ರಾಹ್ಮಣ ದೊಡ್ಡ ನಾರಣಪ್ಪನವರ ಮಗ ಕೃಷ್ಣಪ್ಪ	ಮೈಸೂರು ದೇವರಾಜ ಮೊಹಲಾದಲ್ಲಿರುವ ಕುಂಚಿಗರ ಕಮಾದೊಡ್ಡಯ್ಯನಮಗ ಕಮಾಶಿದ್ದಲಿಂಗಣ	87 3 2	87 3 3	ಹಾರುಹಳ್ಳಿ ಗ್ರಾಮದ ಜಮೀನ್ ಕ್ರಯಪತ್ರ ಮೊಬಲಗು 15 ರೂಪಾಯಿ.
362 1886—87	ಮೈಸೂರು ದೇವರಾಜ ಮೊಹಲಾದಲ್ಲಿರುವ ಕುಂಚಿಗರಜಾತಿ ಕಮಾಶೀ ದೊಡ್ಡಯ್ಯನ ಮಗ ಕಮಾಶೀ ಶಿದ್ದಲಿಂಗಣ	ಮೈಸೂರು ತಾಲ್ಲೂಕು ರಾಮನಹಳ್ಳೀಲಿರುವ ಯಲೇ ಬಣಜಿಗರ ಜಾತಿ ಈರಶಟ್ಟಿಮಗ ಅಮ್ಮತಿಈರದಾಸಯ್ಯ	87 3 2	87 [illegible] 3	ಆಯರಹಳ್ಳಿ ಗ್ರಾಮದ ಜಮೀನ್ ಕ್ರಯಪತ್ರ ಮೊಬಲಗು 50 ರೂಪಾಯಿ.

ಯಂ. ರಾಮಸ್ವಾಮಯ್ಯರ್,
ಫಾರ್ ರಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫೀಶಿನಿಂದ.

ತಾರೀಖು 18ನೇ ಮೇ 1889.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟ್ ಕಡೂರು ತಾಲ್ಲೂಕಿನಲ್ಲಿ ಕುರಂಗದಕಲ್ಲನ್ನ ಜಮಾಯಿಸಿ ಕೊಳ್ಳತಕ್ಕ ಹಕ್ಕುದಾರಿ ಕಡೂರು ತಾಲ್ಲೂಕು ಕಚೇರಿಯಲ್ಲಿ ಸನ್ 1889ನೇ ಇಸವಿ ಜೂನ್ ತಾರೀಖು 26ನೇ ದಿವಿ 11 ಘಂಟೆಗೆ ಪ್ರಾರಂಭಿಸ್ಲ್ಪಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಅಮಲ್‌ದಾರ್ ಅಥವಾ ಶಿರಸ್ತೇದಾರ್ ಹರಾಜು ಮಾಡಿಸುವರು,

3. ಈ ಹರಾಜಿನ ಚಡದರಖಾಸ್ತು ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ ಮಾಡುವ ಪರಿಯಂತರ ಖಾಯಮಾದ್ದಾಗಿ ತಿಳಿದು ಕೊಳ್ಳಕೂಡದು.

616

4. ಈ ಇಜಾರೆಯು ಸನ್ 1890ನೇ ಇಸವಿ ಮಾರ್ಚಿ 31ರ ವರೆಗೆ ಜಾರಿಯಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ನಂತೆ ಆಗುವ ಮೊಬಲಗನ್ನು ಡಿಪಾಜಿಟ ಇಡಬೇಕಲ್ಲದೆ ಹರಾಜು ಮಂಜೂರ ಮಾಡಲ್ಪಟ್ಟ ಸಂಗತಿ ಡೆಪ್ಯುಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ವೊಳಗಾಗಿ ಕ್ರಯದ ಒಟ್ಟು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಮಂದಾಣೆಯಂತೆ ಆಗುವ ಲೋಕಲ್‌ಸೆಸ್ಸು ದೇಖೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡುವದು ಹಾಗೆ ಡಿಪಾಜಿಟ ಮೊಬಲಗು ಹಾಜರ್‌ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕು ದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಟ್ಟು ಪುನಹ ವಿಕ್ರಯಿಸಲ್‌ಪಡುವದು

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಂಮತಿಯನ್ನು ಪಡಿಯಬೇಕು ಜಮೀನ್ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂಕೂಡದು. ಇಜಾರೆದಾರನಿಗೆ ಮಾರಬೇಕೆ ಹೊರ್ತು ಯಿತರ ಜನಗಳಿಗೆ ಮಾರಲೂ ಕೂಡದು.

(b) ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸಕೂಡದು,

(c) ಬಂಜರ್‌ಜಮೀನ್‌ಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು ಅಂಥಾ ಜಮೀನ್‌ಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಳಿದು ಯಿರುತ್ತೆ.

(c) ಯಿಜಾರೆದಾರನು ಕಲ್ಲುಗಳಿಗೋಸ್ಕರ ಜಮೀನ್‌ಗಳನ್ನು ಅಗಿಯಕೂಡದು ವೊಂದು ವೇಳೆ ಹಾಂಗೆ ಅಗದಲ್ಲಿ ಆಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನ್ ಲಾಯಖಯಿರುವ ಹಾಗೆ ಮಾಡಬೇಕು.

ಜೆ. ಜೆ, ಮ್ಯಾಕಲೆರ್ನ್,
ಡೆಪ್ಯುಟಿ ಕಮ್ಮಿಷನರ್.

ಕೊಡಗು ಫಾರೆಸ್ಟು ಡಿಪಾರ್ಟ್‌ಮೆಂಟ.

ನೋಟಸ.

ಸನ್ 1889ನೇ ಇಸವಿ ಮೇ ತಾರೀಖು 4ರಲ್ಲು ಹುಣಸೂರು ಡಿಪೋ ಬಾಬತು ಈ ಕೆಳಗೆ ನಮೂದುಮಾಡಿದ ತೊಲೆ ವಗ್ಯೆರೆ ಸಾಮಾನುಗಳು ಸನ್ 1889ನೇ ಜೂನ್ ತಾರೀಖು 10ರಲ್ಲು ಹರಾಜ್ ಹಾಕಲ್ಪಡುವವು.

ತ್ಯಾಗ	770 ತೊಲೆ	22000 ಅಡಿ
ಹೊನ್ನೆ ಮತ್ತು ಇತರ	750 „	18000 „
ತ್ಯಾಗದ ಮರದ ಬಾಬತು ಕುಯಿದ ಸಾಮಾನುಗಳು		9000 „
ಗಾಡೀಚಕ್ರದ ಆರೇಕಾಲುಗಳು ವಟ್ಟೇಮರಗಳು		2500 ಸಂಖ್ಯೆ

ಷರತ್:—ಸನ್ 1885ನೇ ಇಸವಿ ಮೇ ತಾರೀಖು 16 ನಂಬರು 9ರ ಚೀಫ್ ಕಮ್ಮಿಷನರ ಸಾಹೆಬರವರ ನೋಟಿಫಿಕೇಷನ್ ಮೇರೆ.

ಎಫ್. ಬಿ. ಡಿಕಿನ್ಸನ್,
ಡೆಪ್ಯುಟಿ ಕನ್ಸರವೇಟರ್, ಆಫ್ ಫಾರೆಸ್ಟ್.

ಗವರ್ನಮೆಂಟ ತಯಾರೀ ಬಾಬತು ಸಿಂಕೋನಾಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನಿಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ ಆಫಿಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಗ್ರೇನ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 3—14—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌನ್ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿಒಂದಕ್ಕೆ ರೂ. 4—14—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 9—4—0, ಒಂದು ಪೌನ್‌ವುಳ್ಳ ಡಬ್ಬಿಗೆ 17 ರೂ. 8ಆಣೆ; ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ವ ನೇಟೀವ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ ತಗರದ ಡಬ್ಬಿಗೆ 4 ಆಣೆಯೂ 8 ಔನ್ಸ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಒಂದು ಪೌನ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.